Mr. SPEAKER.—In fact this question was put, very many supplementary questions relating to this mill were put. The Member may please refer to previous questions.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಬೆಂಗಳೂರು, ಚಿತ್ರದುರ್ಗ ಮತ್ತು ಕೋಲಾರ ಈ ಮೂರು ಜಿಲ್ಲೆಗಳಲ್ಲಿ ಸರ್ಕಾರದವರೇ ಬತ್ತವನ್ನು ಕೊಂಡು ಹಲ್ ಮಾಡಿಸುತ್ತೇವೆಂದು ಹೇಳಿದ್ದೀರಿ ; ಇದೇ ರೀತಿ ಬೇರೆ ಜಿಲ್ಲೆಗಳಲ್ಲಿಯೂ ಏಕೆ ಮಾಡಬಾರದು ?

ಶ್ರೀ ಎಚ್. ಸಿದ್ದವೀರಪ್ಪ.—ಈ ಜಿಲ್ಲೆಗಳಲ್ಲಿ ಅಷ್ಟು ಬತ್ತ ಬರುತ್ತಿಲ್ಲ, ಇದೇ ಕಾರಣ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಶಿವಮೊಗ್ಗ ಜಿಲ್ಲೆಯ ಅನವಟ್ಟಿ, ಶಿರಾಳಕೊಪ್ಪ ಮುಂತಾದ ಸ್ಥಳಗಳಲ್ಲಿ 1949 ರಿಂದ ಒಂದೊಂದು ಮಿಲ್ಲೂ ಎಷ್ಟು ಬತ್ತವನ್ನು ಖರೀದಿ ಮಾಡಿಕೊಟ್ಟಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ವಿವರಗಳಿಲ್ಲ. ಹೆಚ್ಚಾಗಿ ವ್ಯಾಪಾರ ಮಾಡಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—Shortageಗೆ ಎಷ್ಟು 'ಮಾರ್ಜಿನ್' ಕೊಡುತ್ತೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಕಾನೂನು ಪ್ರಕಾರ ಇಂತಿಂಥ ಬತ್ತಕ್ಕೆ ಇಷ್ಟಿಷ್ಟು shortage ಎಂದಿದೆ, ಅದರಮೇಲಿದ್ದರೆ ಶೇಕಡ ಅರ್ಧದಷ್ಟು, ಹೀಗೆ ಮಾರ್ಜಿನ್ ಕೊಡುತ್ತೇವೆ. ಇಷ್ಟರಮೇಲೂ ಕಡಿಮೆ ಬಂದರೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಚೀಲಗಳಿಲ್ಲದೆ ಬತ್ತವನ್ನು ಹಾಗೆ ರಾಸಿ ಹಾಕಿತ್ತು. ಸಕಾಲಕ್ಕೆ ಚೀಲಗಳನ್ನು ಕೊಡದೆ.....

ಶ್ರೀ ಎಚ್. ಸಿದ್ದವೀರಪ್ಪ.—ಚೀಲಗಳನ್ನು ಕೊಡಬೇಕೆಂದು ರೂಲ್ಸ್ ಇದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಕಾರಣದಿಂದ ಕಡಿಮೆಬಂದಿದೆಯಲ್ಲವೇ ?

Mr. SPEAKER.—It is understood, ಸ್ವಲ್ಪ ಮಾರ್ಜಿನ್ ಕೊಡುತ್ತೇವೆಂದು ಹೇಳಿದ್ದಾರೆ. Any other supplementary ?

ಶ್ರೀ ವಿ. ಆರ್. ನಾಯ್ಡು.—ಕಂಟ್ರೋಲ್ ಇರುವ ನಗರಗಳಲ್ಲಿ ಅಕ್ಕಿ ಪಾಲಿಷ್ ಮಾಡಬಾರದೆಂದು ಕಟ್ಟಾಜ್ಞೆ ಕೊಟ್ಟಿದ್ದೀರಾ ?

Sri H. SIDDAVEERAPPA.—I want to know how that arises.

Mr. SPEAKER.—That does not arise out of this question.

Arsikere Cotton Sales Society.

Q.—664. Sri K. PANCHAKSHARIAH (Arsikere).—

Will the Government be pleased to state :—

(*a*) the quantity of cotton collected by the Arsikere Cotton Sales Society during 1951-52 and 1952-53 ;

(*b*) whether this Society is a member of the Arsikere Regulated Market Committee ;

(*c*) whether the Secretary working in this Society was appointed by Government and how many years back the appointment was made ;

(*d*) since how many years the Secretary of this Society is staying in Arsikere as Government official ;

(*e*) whether enquiry has been conducted by the Anti-Corruption Department on complaints received against this Secretary ?

A.—Sri H. SIDDAVEERAPPA (Minister for Home and Industries).—

(*a*) 1951-52—30,160 maunds and 7 lbs.

1952-53—10,784 maunds and 16 lbs.

(up to end of February 1953).

(*b*) No.

(*c*) Yes. Since the inception of the Society in 1942.

(*d*) The present Secretary who is a permanent Agricultural Inspector is working since October 1947.

(*e*) No.

ಶ್ರೀ ಕೆ. ಪಂಚಾಕ್ಷರಯ್ಯ.—1951-52ರಲ್ಲಿ 30,160 ಮಣ 7 ಪೌಂಡು ಶೇಖರಣೆಯಾಗಿದೆ, 1952-53ರಲ್ಲಿ 10,784 ಮಣ 16 ಪೌಂಡು ಆಗಿದೆ ಎಂದು ಉತ್ತರದಲ್ಲಿ ತಿಳಿಸಿದೆ. 1952-53ರಲ್ಲಿ ಹಿಂದಿನ ವರ್ಷದಷ್ಟು ಬಾರಿ ಪ್ರಮಾಣದಲ್ಲಿ ಶೇಖರಣೆಯಾಗದೇಯಿರಲು ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಮಳೆಬೆಳೆ ಸರಿಯಾಗಿ ಆಗಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಜನರಲ್ಲಿ ಅಪನಂಬಿಕೆ ಹುಟ್ಟಿದ್ದರಿಂದ ಈ ರೀತಿ ಕಡಿಮೆಯಾಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ, ಇದಕ್ಕೆ ಕಾರಣ ವಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಸದಬರಾಯಿ ಮಾಡುವುದಕ್ಕೆ ಲೈಸೆನ್ಸ್ ಸೊಸೈಟಿಯವರು 45 ರೂಪಾಯಿಗಳು ಕೊಟ್ಟು ತೆಗೆದು ಕೊಂಡಿದ್ದಾರೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಕೆ. ಪಂಚಾಕ್ಷರಯ್ಯ.—ಅದರೆ ಉತ್ತರದಲ್ಲಿ ಇಲ್ಲವೆಂದು ಹೇಳಿದೆ.

ಶ್ರೀ ಎಚ್. ಸಿದ್ದವೀರಪ್ಪ.—45 ರೂಪಾಯಿಗಳನ್ನು ಕೊಟ್ಟು ಲೈಸೆನ್ಸ್ ತೆಗೆದುಕೊಂಡಿರುವುದು, ಷೇರು

ಹೋಲ್ದರು ಬಂದು ಹತ್ತಿ ವಾರಾಟ ಮಾಡುವುದಕ್ಕೆ ಹೋಗಬೇಕಾದರೆ ರೆಗ್ಯುಲೇಟೆಡ್ ಮಾರ್ಕೆಟ್ ಜ್ಯೂರಿಸ್‌ಡಿಕ್‌ಷನ್ ಇರುವ ಪ್ರದೇಶದ ಮೂಲಕ ಹೋಗಬೇಕಾಗುತ್ತದೆಂದು technical ಕಾರಣದಿಂದ ಹೀಗೆ ಲೈಸೆನ್ಸ್ ತೆಗೆದುಕೊಂಡಿದ್ದಾರೆಂದು ನನಗೆ ವರದಿ ಬಂದಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಸೊಸೈಟಿ ಇರುವ ಆ ಪ್ರದೇಶ ರೆಗ್ಯುಲೇಟೆಡ್ ಮಾರ್ಕೆಟ್ಟಿನ ಪ್ರದೇಶಕ್ಕೆ ಒಳಪಟ್ಟಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಕಾನೂನು ರೀತ್ಯಾ ಇಲ್ಲ ಎಂದು ಅವರು ಹೇಳುತ್ತಾರೆ. ಉಂಟು ಎಂದು ಇವರು ಹೇಳುತ್ತಾರೆ. ನಾನು ತೀರ್ಮಾನ ಕೊಡಬೇಕಾಗಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಲೈಸೆನ್ಸ್ ತೆಗೆದು ಕೊಂಡಮೇಲೆ ರೆಗ್ಯುಲೇಟೆಡ್ ಮಾರ್ಕೆಟ್ಟು ಮೂಲಕ ಏಕೆ ಹೋಗಬಾರದು?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿ ಸ್ವಲ್ಪ ಘರ್ಷಣೆ ನಡೆದಿದೆ, ಉಂಟು ಎಂದು ಅವರು, ಇಲ್ಲ ಎಂದು ಇವರು. ನಾನು ಕೂಲಂಕಷವಾಗಿ ಪರಿಶೀಲಿಸಿ, ಕಾನೂನಿನ ದೃಷ್ಟಿಯಿಂದ ಯಾವ ತೀರ್ಮಾನ ಕೊಡಬೇಕೋ ಅದನ್ನು ಕೊಡುತ್ತೇನೆ.

ಶ್ರೀ ಕೆ. ಪಂಚಾಕ್ಷರಯ್ಯ.—ಅವರು ಹೇಳುವ ರೀತಿ, ಅಲ್ಲ ಎಂದು ಒಪ್ಪಿಕೊಂಡರೆ, ಹತ್ತು ಸಾವಿರ ಮಣ ಹತ್ತಿ ತೂಗುವುದು ಅನ್ಯಾಯವಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ತೂಗಿಲ್ಲವೆಂದು ಹೇಳಿದ್ದಾರೆ. ಹತ್ತಿ ವಾರಾಟ ಮಾಡುವುದಿಲ್ಲ ಲೈಟ್ ವಾತ್ರ ವಾರುತ್ತೇವೆ, ಸೊಸೈಟಿಯಲ್ಲಿ ತಂದು ವಾರಾಟ ಮಾಡುವುದರಿಂದ ರೆಗ್ಯುಲೇಟೆಡ್ ಮಾರ್ಕೆಟ್ ವಿಧಿ ನಮಗೆ ಅನ್ವಯಿಸುವುದಿಲ್ಲವೆಂದು ಹೇಳುತ್ತಾರೆ. ಆದುದರಿಂದ, ಇದರಲ್ಲಿ 'ಲಾ' ವಿಚಾರವಿರುವುದರಿಂದ 'ಲಾ' ಇಲಾಖೆಯಿಂದ ಪರೀಕ್ಷೆಮಾಡಿಸಿ ತೀರ್ಮಾನ ಕೊಡುತ್ತೇನೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ಬಗ್ಗೆ ವರ್ತಕರು ನಿಯೋಗ ಬಂದಾಗ ಸರ್ಕಾರದವರು ಈ ನಿಯಮ ಸೊಸೈಟಿಗೂ ಅನ್ವಯಿಸುತ್ತದೆಂದು ಅಪ್ಪಣೆ ಕೊಟ್ಟಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಪರಿಶೀಲನೆ ಮಾಡುತ್ತೇವೆ, ಎಂದು ಹೇಳಿದ್ದುಂಟು. 'ಲಾ' ದೃಷ್ಟಿಯಿಂದ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ವಿಚಾರದಲ್ಲಿ ಜಿಲ್ಲಾಧಿಕಾರಿಗಳು ಏನು ಅಭಿಪ್ರಾಯಿಸಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯ ಛೇರ್ಮನ್ ಆಗಿರುವುದರಿಂದ ಅವರು ರೆಗ್ಯುಲೇಟೆಡ್ ಮಾರ್ಕೆಟ್ ರೂಲ್ಸ್ ಅನುಸರಿಸಬೇಕೆಂದು ಹೇಳಿದ್ದಾರೆ.

ಶ್ರೀ ಕೆ. ಪಂಚಾಕ್ಷರಯ್ಯ.—ಆ ರೀತಿ ಒಂದು ನೋಟೀಸ್ ಕೂಡ ಸೊಸೈಟಿಯ ಸೆಕ್ರೆಟರಿಯವರಿಗೆ ಕೊಟ್ಟಿದ್ದಾರಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಕೆ. ಪಂಚಾಕ್ಷರಯ್ಯ.—ಅಂದಮೇಲೆ, ಅವರು ಜಿಲ್ಲಾಧಿಕಾರಿಗಳ ಆಜ್ಞೆಯನ್ನು ಉಲ್ಲಂಘನೆ ಮಾಡಿದ್ದಾರಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ನೋಟೀಸ್ ಕೊಟ್ಟಿರುವುದು ರೆಗ್ಯುಲೇಟೆಡ್ ಮಾರ್ಕೆಟ್ಟಿನ ಚೇರ್ಮನ್ ಆಗಿ.

ಶ್ರೀ ಕೆ. ಪಂಚಾಕ್ಷರಯ್ಯ.—ಹಾಗಿದ್ದರೆ ಅದನ್ನು ಪುರಸ್ಕಾರ ಮಾಡಿದ್ದಾರೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್ ಬೇಕು.

ಶ್ರೀ ಕೆ. ಪಂಚಾಕ್ಷರಯ್ಯ.—ಚೀಫ್ ಮಾರ್ಕೆಟಿಂಗ್ ಆಫೀಸರು ಸರ್ಕಾರದ ನೂಚನೆಮೇಲೆ ಸ್ಥಳಕ್ಕೆ ಬಂದು ಸೊಸೈಟಿಯವರು ರೆಗ್ಯುಲೇಟೆಡ್ ಮಾರ್ಕೆಟ್ ನಿಯಮಗಳಂತೆ ಹತ್ತಿ ವಗ್ಗೈರೆಯ ತೂಕವನ್ನು ರೆಗ್ಯುಲೇಟೆಡ್ ಮಾರ್ಕೆಟ್ ಮೂಲಕವೇ ನಡೆಸಬೇಕೆಂದು ತಿಳಿಸಿದರಲ್ಲವೇ?

Sri H. SIDDAVEERAPPA.—Notice please.

12-30 P.M.

ಶ್ರೀ ಕೆ. ಪಂಚಾಕ್ಷರಯ್ಯ.—(ಸಿ) ಪ್ರಶ್ನೆಗೆ ಉತ್ತರವಾಗಿ "ಹೌದು" ಎಂದು ತಿಳಿಸಿದ್ದೀರಿ, ಇವರು 1942 ರಿಂದಲೂ ಅರಸೀಕೆರೆಯಲ್ಲೇ ಇದ್ದಾರಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—(ಡಿ) ಪ್ರಶ್ನೆಯ ಉತ್ತರದಲ್ಲಿ ತಿಳಿಸಿರುವ ಪ್ರಕಾರ ಅವರು ಅರಸೀಕೆರೆಯಲ್ಲಿ 1947 ರಿಂದಲೂ ಅಲ್ಲಿ ಸೆಕ್ರೆಟರಿಗಳಾಗಿ ಕೆಲಸ ಮಾಡುತ್ತಿದ್ದಾರೆಂದು ತಿಳಿದುಬಂದಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಇವರು 47ರಲ್ಲಿ ವ್ಯವಸಾಯದ ಇನ್‌ಸ್ಪೆಕ್ಟರಾಗಿ, ಅಲ್ಲಿಗೆ ಸೆಕ್ರೆಟರಿಗಳಾಗುವುದಕ್ಕಿಂತಲೂ ಮುಂಚೆ, ಇವರು ಅಲ್ಲೇ ಇರಲಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿಷಯ ನನಗೆ ತಿಳಿಯದು. 1947 ರಿಂದಲೂ ಅಲ್ಲಿದ್ದಾರೆಂದು ನನಗೆ ತಿಳಿದು ಬಂದಿದೆ. ನನಗೆ ಬಂದಿರುವ ವರದಿ ಪ್ರಕಾರ ಹಾಗೆ ಗೊತ್ತಾಗಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—1942 ರಿಂದಲೂ, ಹೀಗೆ ಒಬ್ಬ ಅಧಿಕಾರಿಯನ್ನು ಒಂದೇ ಸ್ಥಳದಲ್ಲಡುವುದು, ಹಾಗೆ, ದುಡ್ಡಿನ ವಿಲಾವಣೆ ಇರತಕ್ಕಂಥ ಒಂದು ಸೊಸೈಟಿಯಲ್ಲಿ 10-12 ವರ್ಷ ಇಡುವುದು ತತ್ವಕ್ಕೇ ವಿರೋಧವಾಗುವುದಿಲ್ಲವೇ?

Sri. H. SIDDAVEERAPPA.—I have received a report that his good services have been recognised by the agriculturists for whose benefit the society is meant. ಅದಲ್ಲದೆ, ಅಲ್ಲಿಗೆ ಈಗ ತಾನೆ ಹೊಸದಾಗಿ ಜಿನ್ನುಗಳನ್ನು ಹಾಕಬೇಕಾಗಿದೆ. ಅದನ್ನೆಲ್ಲಾ ಡೆವಲಪ್ ಮಾಡಬೇಕು. ಅಲ್ಲಿಗೆ ಈಗ 75 ಸಾವಿರ ರೂಪಾಯಿಗಳ ಸಾಲವನ್ನು ಬೇರೆ ಮಂಜೂರು ಮಾಡಿದ್ದೇವೆ. ಈ ಬಾಬಿನ್ನು ಇನ್ನೂ ಹೆಚ್ಚಿಗೆ ಡೆವಲಪ್ ಮಾಡಬೇಕಾಗಿದ್ದರೆ ಆತನ ಸರ್ವೀಸ್ ಅಲ್ಲಿ ಇನ್ನೂ ಇರಬೇಕಾಗಿರುತ್ತದೆಂದು ಆ ಇಲಾಖೆಯ ಪೊಖ್ತೇನರರು ತಿಳಿಸಿರುವಕಾರಣ ಆತನನ್ನು ಅಲ್ಲೇ ಇಡರಾಗಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಇವರು ಲಂಚ ವಗ್ಗೈರೆ ತೆಗೆದುಕೊಳ್ಳುತ್ತಾರೆಂದು ಇವರಮೇಲೆ ದೂರುಗಳು ಬಂದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು; ಕೆಲವು ಬೇನಾಮಿ ಪಿಟಿಷನ್‌ಗಳು ಬಂದಿದ್ದವು. ಅವುಗಳನ್ನು ಲಂಡನ್‌ರೋಧ ಇಲಾಖೆಗೆ ಕಳುಹಿಸಿ ತನಿಖೆಮಾಡಿಸಲಾಯಿತು. ಆದರೆ ಆ ಅರ್ಜಿಗಳಲ್ಲಿ ನಮೂದಿಸಿರುವ ಆಪಾದನೆಗಳು ಸರಿಯಾಗಿ ರುಜುವಾತಾಗಿಲ್ಲವೆಂದು ನನಗೆ ತಾ॥ 14-3-1952 ರಲ್ಲಿ ವರದಿ ಬಂದಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಇದನ್ನು ವಿಚಾರಣೆ ನಡೆಸಿದವರು ಯಾರು?

ಶ್ರೀ ಎಚ್. ಸಿದ್ದವೀರಪ್ಪ.—ಡಿಪಾರ್ಟ್‌ಮೆಂಟಿನವರು ಮಾಡಿದ್ದಾರೆ.

ಶ್ರೀ ಎ. ಭೀಮಪ್ಪನಾಯಕ್.—ಇಂಥ ಕೋ-ಆಪರೇಟೀವ್ ಸಂಸ್ಥೆಗಳು ದಾವಣಗೆರೆ ಇತ್ಯಾದಿ ಬೇರೆ ಕಡೆಗಳಲ್ಲಿದ್ದು ಅವು ರೆಗ್ಯುಲೇಟೆಡ್ ಮಾರ್ಕೆಟ್ಟಿನ ಸದಸ್ಯತ್ವವನ್ನು ಪಡೆದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಪಡೆದಿವೆ.

ಶ್ರೀ ಎ. ಭೀಮಪ್ಪನಾಯಕ್.—ಅಲ್ಲಿರತಕ್ಕಂಥ ರೂಲ್ಸನ್ನು ಇಲ್ಲಿಯೂ ಅನುಸರಿಸುವುದು ನ್ಯಾಯವಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲಿ ಒಂದು ಲೀಗಲ್ ಪ್ರಶ್ನೆಯನ್ನೆತ್ತಿದ್ದಾರೆ; ಇದು ಕಾನೂನು ಪ್ರಕಾರ ಆಗುವುದಿಲ್ಲ ಎಂದು. ಅದಕ್ಕಾಗಿ ಒಂದು ತೀರ್ಮಾನವನ್ನು ಕೊಡಬೇಕಾಗಿದೆ. ದಾವಣಗೆರೆಯಲ್ಲಿರತಕ್ಕವರೆಲ್ಲ ಹೊಂದಿಕೊಂಡು ಹೋಗುತ್ತಿದ್ದಾರೆ. ಆದರೆ ಇಲ್ಲಿ ಒಂದು ಘರ್ಷಣೆ ಬಂದಿದೆ. ಅದಕ್ಕಾಗಿ ಒಂದು ತೀರ್ಮಾನ ಕೊಡಬೇಕಾಗಿದೆ.

ಶ್ರೀ ಎ. ಭೀಮಪ್ಪನಾಯಕ್.—ತಾವು ಪಾರ್ಲಿಮೆಂಟಿನ ಸದಸ್ಯರಾಗಿದ್ದಾಗ ಇಂಡಿಯಾ ದೇಶದಲ್ಲಿ ಅನೇಕ ಕಡೆ ಇರತಕ್ಕ ರೆಗ್ಯುಲೇಟೆಡ್ ಮಾರ್ಕೆಟ್ಟುಗಳ ಪರಿಶೀಲನೆಯನ್ನು ಮಾಡಿದ್ದೀರಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎ. ಭೀಮಪ್ಪನಾಯಕ್.—ಅಲ್ಲಿ ಎಲ್ಲ ಕೋ-ಆಪರೇಟೀವ್ ಸೊಸೈಟಿಗಳವರೂ ಆ ರೆಗ್ಯುಲೇಟೆಡ್ ಮಾರ್ಕೆಟ್ಟಿನ ಸದಸ್ಯರಾಗಿದ್ದಾರಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎ. ಭೀಮಪ್ಪನಾಯಕ್.—ಯಾವ ಯಾವ ರೂಲ್ಸುಗಳಲ್ಲಿ, ಯಾವ ಯಾವ ವಿಧಿಯಲ್ಲಿ ಈ ವಿನಾಯಿತಿ ಇದೆ ಎಂಬುದನ್ನು ತಾವು ಕೋಟ್ ಮಾಡುತ್ತೀರಾ?

Sri H. SIDDAVEERAPPA.—They have written a very long letter raising several points.

Sri A. BHEEMAPPA NAIK.—I do not want that long letter. Is there any section under which they claimed exemption?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಹೇಳಿರತಕ್ಕ ಪ್ರಕಾರ ಈ ರೆಗ್ಯುಲೇಟೆಡ್ ಮಾರ್ಕೆಟ್ಟಿನವರು ಕಪ್ಪಾಸ್ ಮಾರಾಟಮಾಡುವದಿಲ್ಲ. ಅವನ್ನು ಜಿನ್ನಿಂಗ್ ಮಾಡಿ ಮಾರಾಟಮಾಡುವುದರಿಂದ ತಾವು ಹೇಳುವುದು ಇದಕ್ಕೆ ಅನ್ವಯಿಸುವುದಿಲ್ಲ. ಸೊಸೈಟಿಯವರು ಕಮಿಷನ್ ಏಜಂಟರಲ್ಲ. ಆದುದರಿಂದ ನಮಗೆ ಇದು ಅನ್ವಯಿಸುವುದಿಲ್ಲ. ಹೀಗೆ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಯಾವ ಯಾವ ಕಾನೂನು ಅನ್ವಯಿಸಬೇಕೋ ಅದು ಒಂದೂ ಅನ್ವಯಿಸುವುದಿಲ್ಲ. ಆದ್ದರಿಂದ ಇದು ಸೇರುವುದಿಲ್ಲ ಎಂದು ಹೇಳಿದ್ದಾರೆ. ಹಾಗೆ ಅವರು ಹೇಳತಕ್ಕ ಕಂಟೆಕ್ಷನ್ ಸರಿಯೇ ಅಥವಾ ಅಲ್ಲವೆ ಎಂಬುದನ್ನು ಕಾನೂನು ಪ್ರಕಾರ ಪರಿಶೀಲನೆಮಾಡಲು ಸರ್ಕಾರದ 'ಲಾ' ಸೆಕ್ಷನ್ನಿಗೆ ತಿಳಿಸಿದ್ದೇನೆ. ಅಲ್ಲಿ ಈ ಪ್ರಶ್ನೆ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—1951-52 ರಲ್ಲಿ 30, 160 ಮಣ ಹತ್ತಿ ಅಲ್ಲಿ ಸಂಗ್ರಹಣವಾಗಿರುವುದರಿಂದ ಅಲ್ಲಿ ಹತ್ತಿ ಬೆಳೆ ಜಾಸ್ತಿಯಾಗಿರುತ್ತದೆಂದು ಗೊತ್ತಾಗುತ್ತಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—1952-53 ರಲ್ಲಿ 10 ಸಾವಿರ ಚಿಲ್ಲರೆ ಮಣ ಮಾತ್ರ ಸಂಗ್ರಹಣವಾಗಿದೆ. ಹೀಗೆ ಸಂಗ್ರಹಣದಿಂದ ಅದು ಗೊತ್ತಾಗುವುದಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಆ ಸೊಸೈಟಿಗೆ ಎಷ್ಟು ಜನ ರೈತರು ಮೆಂಬರುಗಳಾಗಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಅಂಥ ಸೊಸೈಟಿಗಳಲ್ಲಿ ರೈತಾಪಿ ಜನರೇ ಹೆಚ್ಚಿಗೆ ಮೆಂಬರುಗಳಾಗಿದ್ದರೆ ಅನುಕೂಲವಾಗಿರುತ್ತದೆಯೆಂಬ ಅಂಶ ತಮ್ಮ ಅವಗಾಹನೆಗೆ ಬಂದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಅಲ್ಲಿ ಈಗ ಬಹಳ ಜನ ರೈತರೇ ಇದ್ದಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ವ್ಯಾಪಾರಸ್ಥರು ಹೆಚ್ಚಾಗಿ ಕುಳಿತು ಕೆಲಸ ಮಾಡುವ ಕಡೆ ಮೋಸವೇ ಹೆಚ್ಚಾಗಿ ನಡೆಯುತ್ತಿರುವುದರಿಂದ, ಆ ಸೊಸೈಟಿಗಳ ಕೆಲಸ ಸರಿಯಾಗಿ ನಡೆಯುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಅದು ತಮ್ಮ ಅಭಿಪ್ರಾಯದ ಪ್ರಶ್ನೆಯಾಯಿತು.

ಶ್ರೀ ಬಿ. ಎಚ್. ಬೋರಣ್ಣಗೌಡ.—ಅನೇಕ ವರ್ತಕರು ಹಾಗೆ ಮೋಸವಾಗಬೇಕೆಂದು ಸೊಸೈಟಿಗಳಲ್ಲಿ ಸೇರಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ಅಭಿಪ್ರಾಯದಿಂದ ಅವರು ಸೇರಿಲ್ಲ. ಆದರಲ್ಲಿ ಅನುಕೂಲವಿದೆಯೆಂದು ಅವರು ಸೇರಿರುತ್ತಾರೆ, ಅಷ್ಟೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ಸೊಸೈಟಿ ಇರಲು ಅನಕಾಶ ಕೊಡಬಾರದು, ಇದನ್ನು ಹಾಳು ಮಾಡಬೇಕೆಂದು ಅನೇಕ ವರ್ತಕರು, 'ಈ ಸೆಕ್ರೆಟರಿಗಳನ್ನು ಅಲ್ಲಿ ಇಡಕೂಡದು' ಇವರನ್ನು ವರ್ಗಮಾಡಬೇಕು ಎಂದು ತಮಗೆ ಅನಾನಿಮಸ್ ಅರ್ಜಿಗಳನ್ನು ಹಾಕಿರುವುದಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಅಲ್ಲಿ ಕೆಲಸ ಮಾಡುತ್ತಿರುವ ಸೆಕ್ರೆಟರಿಗಳನ್ನು ಬೇರೆ ಕಡೆಗೆ ವರ್ಗ ಮಾಡಿದರೆ ಅಲ್ಲಯ ಕೆಲಸಕ್ಕೆ ತುಂಬ ಅನಾನುಕೂಲವಾಗುತ್ತದೆಂದು ಆ ಇರಾಖೆಯ ಅಧಿಕಾರಿಗಳು ತಿಳಿಸಿದ್ದರಿಂದ ಅವರನ್ನು ಅಲ್ಲೇ ಇಡಲಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಅವರಮೇಲೆ ದೂರುಗಳು ಬಂದಿರುವುದು ನಿಜವೇ?

ಶ್ರೀ ಎಚ್. ಸಿದ್ದವೀರಪ್ಪ.—ಆಗಲೇ ಈ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ.—ಇದು 1947 ರಲ್ಲೇ ಲಿಕ್ವಿಡೇಟ್ ಆಗುವಂಥ ಸ್ಥಿತಿಗೆ ಬಂದಿತ್ತಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಇದು ಇತ್ತೀಚೆಗೆ ಅಭಿವೃದ್ಧಿಯಾಗುತ್ತ ಬಂದಿದೆಯಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಇದು ಇತ್ತೀಚೆಗೆ ತನ್ನ ಕೈಲೆ ಸಾವಿರಾರು ರೂಪಾಯಿಗಳನ್ನಿಟ್ಟುಕೊಂಡು ಚೆನ್ನಾಗಿ ಕೆಲಸಮಾಡಿಕೊಂಡು ಬರುತ್ತಿದೆಯಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಚೆನ್ನಾಗಿ ಕೆಲಸಮಾಡಿಕೊಂಡು ಬರುತ್ತಿದೆ. ಅದಕ್ಕಾಗಿ ಸರ್ಕಾರದವರೂ ಪ್ರೋತ್ಸಾಹನೀಡುತ್ತಾ ಬಂದಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ರೈತರ ಪರವಾಗಿ ಸ್ಟಾಕ್ ಮಾಡಿದ್ದನ್ನು ಜನ್ ಮಾಡಿ ತಾನೆ ಮಾರಾಟ ಮಾಡುವುದು?

ಶ್ರೀ ಎಚ್. ಸಿದ್ದವೀರಪ್ಪ.—ಈ ಪ್ರಶ್ನೆಗೆ ಆಗಲೇ ಉತ್ತರ ಹೇಳಿರುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಅಲ್ಲಿ ಹತ್ತಾರು ಜಿನ್ನುಗಳಿರುವುದರಿಂದ ರೈತರಿಗೆ ತಮ್ಮ ಹತ್ತಿಯನ್ನು ಮಾರಾಟಮಾಡಲು ಅನುಕೂಲವಾಗಿದೆಯಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಇವು ರೈತರಿಗೆ ಲಾಭಕರವಾಗಿವೆಯಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ನಿಜ.

ಶ್ರೀ ಬಿ. ಹುಚ್ಚೇಗೌಡ.—ಅಲ್ಲಿದ್ದ 2-3 ಖಾಸಗಿ ಜಿನ್ನುಗಳನ್ನು ಇವರು ಕೆಲವರು ಕೊಂಡುಕೊಂಡು ಅವುಗಳನ್ನು ಈಗ ಮುಚ್ಚಿ ಹತ್ತಿಯನ್ನು ತೆಗೆದುಕೊಂಡು ಹೋಗಿ ದಾವಣಗೆರೆಯಲ್ಲಿ ಕಪ್ಪಾಸಿನಲ್ಲಿ ವಾರಾಟ ಮಾಡಬೇಕೆಂಬ ಉದ್ದೇಶದಿಂದ ತಾನೆ ಹಾಗೆ ಆ ಜಿನ್ನುಗಳನ್ನು ಮುಚ್ಚಿಸಿರುವುದು?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿಗೆ ನಾವು ಈಗ ಜಿನ್ನುಗಳನ್ನೂ ಮತ್ತು ಪ್ರೆಸ್ಸಿಂಗ್ ಮೆಷಿನ್‌ಗಳನ್ನೂ ಸಬ್ಸಿಡಿ ಮಾಡಿ, ಅವುಗಳನ್ನು ನಡೆಸಲು ಅವರಿಗೆ ರೆಜಿಸ್ಟ್ರೇಷನ್ನು ಮಂಜೂರುಮಾಡಲಾಗಿದೆ. It now depends upon the enthusiasm of the members of the society and it is for them to make use of the advantages given.

Policies adopted by the Central Depressed Class Policy Committee.

Q.—387. Sri G. DUGGAPPA (Holalkere—Scheduled Castes).—

Will the Government be pleased to state:—

(*a*) the policies adopted and the decisions taken by the Central Depressed Class Policy Committee;

(*b*) whether the depressed class uplift work has been entrusted to an officer?

A.—Sri A. G. RAMACHANDRA RAO (Minister for Law and Education) [on behalf of SRI K. HANUMANTHAIYA (Chief Minister)].—

(*a*) No fresh policies have been adopted by the Committee. A copy of each of the proceedings of the two meetings are placed on the Table of the House No. 8, L.A. of 1953.

(*b*) The work is entrusted to a Commissioner who is assisted by a Special Officer.

Sri DUGGAPPA.—Will the Government be pleased to state what was the object in constituting that Central Depressed Class Policy Committee?

Sri A. G. RAMACHANDRA RAO.—To intensify the work of the amelioration of the Depressed Classes.

Sri G. DUGGAPPA.—Is it not a fact that the Committee was constituted to review the progress of the work done in connection with the amelioration of the Depressed Classes?

Sri A. G. RAMACHANDRA RAO.—That is a part of the work.

Sri G. DUGGAPPA.—How is it that Government have said that no new policies have been adopted in this work?

Sri A. G. RAMACHANDRA RAO.—It is not new. It is a continuation of the old policy.

Sri G. DUGGAPPA.—Will the Government state whether the recommendations or the decisions taken by this Committee have been sent to them?

Sri A. G. RAMACHANDRA RAO.—Yes, they have been received by the Government and are receiving sympathetic consideration.

Sri G. DUGGAPPA.—Has any action been taken by the Government regarding the proposals and recommendations forwarded by this Committee to them?

Sri A. G. RAMACHANDRA RAO.—Yes.